ಅದಿರತದೆ ಅಂತ ಬಾಂಡುಪೇಪರ ಮೇಲೆ ಬರಕೊಡತೀಯಾ?...' ಅಸಹನೆಯಲ್ಲಿ ಸವಾಲು ಹಾಕಿದ್ದರು. 'ಎಲ್ಲಾ ಒಂದೇ ತರಾ ಆಗತದೆ ಅಂತ ನಿನಗ್ಯಾಕನಿಸ್ಬೇಕು? ನನಗವಳೇ ಸರಿ ಅಂತ ಗೊತ್ತು...' ಭಂಡ ಉತ್ತರ. ಮಾತು ಮುಂದುವರಿಸಿದರೆ ಜಗಳ ಹೊರತು ಇನ್ನೇನಿಲ್ಲ ಅನ್ನುವ ಸಿಟ್ಟಿನಲ್ಲಿ ಎದ್ದು ಬಂದಿದ್ದರು. ಲವಂಗಿಕಾ ವಿಚ್ಛೇದನಕೊಪ್ಪದೆ ಹಟಕ್ಕೆ ಬಿದ್ದಳು. ಆಮೇಲೆ ಪರಸ್ಪರ ಸಮ್ಮತಿಯ ಸಹಿ ಬೇಕಿದ್ದರೆ ನಲವತ್ತು ಲಕ್ಷ ಕೊಡಬೇಕೆಂದು ಶರತ್ತನ್ನಿಟ್ಟು ಮನೆಯಲ್ಲೆ ಉಳಿದಳು. ಅವರವರಿಗೆ ಬೇಕಾದ್ದು ತಿನ್ನುತ್ತ ಬೇರೆಬೇರೆ ಕೋಣೆಗಳಲ್ಲಿ ವಸತಿ ಹೂಡಿದ್ದರು. ಯಾರಲ್ಲು ಹೇಳಿಕೊಳ್ಳಲಾಗದೆ ತಾನು ಗಿರಿಜಾ ಎದೆಯಲ್ಲೇ ಬೆಂಕಿ ಇಟ್ಟುಕೊಂಡಿದ್ದರೂ ಎದೆಗೂಡೇನು ಬ್ರಹ್ಮನ ಒಡಲನ್ನೂ ಮೂಸಿನೋಡುವ ಸಮಾಜದ ಅನವಶ್ಯಕ ಆಸಕ್ತಿಗೆ ಅಲ್ಲಲ್ಲಿ ಗುಸುಗುಸು ಸುರುವಾಗಿ ತಿಂಗಳಾಗಿತ್ತು. ಏನಾದರು ಸತ್ತುಕೊಳ್ಳಲಿ ಎಂಬ ಅನಾಸಕ್ತಿಯಿಂದಿದ್ದುಬಿಡುವ ಸಾತ್ವಿಕ ಸಿಟ್ಟಿನ ನಿರ್ಧಾರ ಸಾಧ್ಯವಾಗಿರಲಿಲ್ಲ. ನಲವತ್ತು ಲಕ್ಷ ಹೊಂದಿಸಿಕೊಡಿ ಅನ್ನೋ ಬೇಡಿಕೆ ಸುಮಂತನಿಂದ ಬಂದು ಈಗೀಗ ಪದೇಪದೇ ವಿಚಾರಿಸುವ ಒತ್ತಡವಾಗಿ ಮಾರ್ಪಟ್ಟಿತ್ತು. ಸಮಯ ಸರಿದಂತೆ ಹೆಂಡತಿಯೂ '...ಏನಾದ್ರೂ ಮಾಡಿ ಅತ್ಲಾಗೆ. ಅವ ಗೋಳಾಡತಾ ಇದ್ರೆ ಈ ಆಸ್ತಿಯೆಲ್ಲ ನಮ್ಮ ಯಾವ ಸುಖಕ್ಕೆ?' ಅಂತ ಗೊಣಗಾಟ ಸುರುಮಾಡಿ ತನ್ನನ್ನು ಒಂಟಿಯಾಗಿಸುವ ಸಂಧಿಕಾಲ ನಿಕಟದಲ್ಲಿತ್ತು. ತಾನಾಗಲೆ ಒಂಟಿಯಾಗಿ ಗಿಡಿದಿಟ್ಟುಕೊಂಡ ಮತ್ತೊಂದು ಕೆಂಡ ಎದೆಯಲ್ಲಿದೆಯಲ್ಲ! ಗಿರಿಜ ಜಾಂಡೀಸಾಗಿ ಮೂರು ತಿಂಗಳು ಲಾಚಾರಾದಾಗ ಯಾವ ದುಷ್ಟಗ್ರಹ ಮಾದೇವಿಯ ಒಂಟಿಬಿಡಾರಕ್ಕೆ ಎಳೆದೊಯ್ದಿತೋ. 'ಹಾದರದ ಮುಂಡೆ! ಇಪ್ಪತ್ತು ಲಕ್ಷ ಹ್ಯಾಗಿರ್ತದೆ ನೋಡಿದ್ಯೇನೆ ನೀನು? ಈಗ ಇಷ್ಟುಕಾಲದಮೇಲೆ ಅವನ ಚಿತಾವಣೆಗೆ ಬಿದ್ದೆ ಹೌದಾ? ಏನು ಸಾಕ್ಷಿ ಇದೆ ನಿನ್ನತ್ರ?' ಹಲ್ಲುಮಟ್ಟೆ ಕಚ್ಚಿ ಕೆಳದನಿಯಲ್ಲಿ ಅಬ್ಬರಿಸಿದ್ದಕ್ಕೆ ಅವಳೂ ಹೆದರದೆ '...ಸಾಕ್ಷಿ ಕೇಳೂದ ನೀವು? ಮೈಮೇಲೆ ಬಿದ್ದು ಎಳಕಂಡ್ರಲ್ದ? ಚಡ್ಡಿ ಹಾಂಗೇ ಇಟ್ಟೀದೆ, ತೋರ್ಸಲಾ?' ಅಂದ ಅನಿರೀಕ್ಷಿತಕ್ಕೆ, ಅವಳಿಗ್ಯಾವ ಚಡ್ಡಿ? ಅನ್ನುವ ಉಡಾಫೆ ಜಿಜ್ಞಾಸೆ ಆಮೇಲೆ ಆಗಾಗ ಬಂದರೂ, ಆ ಕ್ಷಣಕ್ಕೆ ಅದು ಮುಖದಮೇಲೇ ಬಿದ್ದಂತೆನಿಸಿ ಮೈಯ ನೀರೆಲ್ಲ ಬಸಿದುಹೋಗಿ ಕುಸಿದುಬೀಳುವಂತಾಗಿತ್ತು. ಎಂಥಾ ಕಾಲ! ಯಾರು ಬೇಕಾದ್ರು ಈಗ ಲಕ್ಷದ ಮಾತಾಡಬಹುದು...

ಯಶವಂತಪುರ ಸಮೀಪಿಸಿತು. ಇಳಿಯುವವರು ಸಾಮಾನು ಜೋಡಿಸಿಕೊಳ್ಳತೊಡಗಿದರು. ಒಂದು ಚೂರು ಕಾಗದದಲ್ಲಿ ತಮ್ಮ ನಂಬರು ವಿಳಾಸ ಬರೆದು ಕೊಡುತ್ತ, 'ಅಡಕೆತೋಟದ ವಿಷಯ ನೆನಪಿರಲಿ, ಒಳ್ಳೇ ಹೂಡಿಕೆ... ಆಯ್ತಾ? ಫೋನು ಮಾಡತಾ ಇರಿ' ಅಂದರು. ಕಾಮತರ ನಂಬರನ್ನೂ ಪಡೆದುಕೊಂಡರು. ಅಲ್ಲಿಂದ ಮೆಜೆಸ್ಟಿಕ್ಕಿಗೆ ಹತ್ತು ನಿಮಿಷ. ರೈಲು ಯಾವುದೋ ಕ್ರಾಸಿಂಗಿಗೆ ಕಾಯುತ್ತ ನಿಂತುಬಿಟ್ಟಿತು. ಮೆಟ್ರೊನೆ ಹತ್ತೋದಾದರೆ ಯಶವಂತಪುರದಲ್ಲು ಇದೆಯಲ್ಲ ಅನ್ನುವುದು ಹೊಳೆದು ಬ್ಯಾಗೆತ್ತಿಕೊಂಡು ಇಳಿದೇಬಿಟ್ಟರು.

ಜೇಪಿ ನಗರದ ಫ್ಲ್ಯಾಟು ಸಮೀಪಿಸುತ್ತಿದ್ದಂತೆ ಒಂದು ಮುಜುಗರ ಮೈಯೆಲ್ಲ ಆವರಿಸಿತು. ಸುಮಂತನಿದ್ದ. 'ನೀನು ಕಾಲುಮುಖ ತೊಳೆದು ಫ್ರೆಶ್ ಆಗಿ ಬಾ. ಕೆಳಗೆ ಮೆಸ್ಸಲ್ಲಿ ಉಂಡು ಬರುವ' ಅಂದ. ಊಟ ಮೌನದಲ್ಲೆ ಮುಗಿಯಿತು. ವಾಪಸು ಬಂದಮೇಲೆ 'ಅವಳಿಲ್ಲವೇನೋ?' ವಿಚಾರಿಸಿದರು. 'ನೆಂಟರ ಮನೆಗೋ ಫ್ರೆಂಡ್ಸ್ ಮನೆಗೊ ಹೋಗಿರಬಹುದು, ನನಗೆ ಹೇಳಿಲ್ಲ. ಅವಳ ಹತ್ರ ಇನ್ನೊಂದು ಚಾವಿ ಇರತದೆ' ಅಂದ. ಆಮೇಲೆ 'ಹಣದ್ದು ಏನಾದ್ರು ಮಾಡಿದ್ಯಾ?' ಕೇಳಿದ. '...ಏನಾದರೂ ಮಾಡಲೇಬೇಕಲ್ಲಪಾ! ನಮ್ಮ ಗ್ರಹಚಾರ. ತೋಟದಮೇಲೆ ಸಾಲಕ್ಕೆ ಪ್ರಯತ್ನ ನಡೆದಿದೆ' ಬೇಜಾರಿಂದ ನುಡಿದರು. ಉತ್ತೇಜಿತನಾಗಿ 'ಬೇಗ ಒಂದು ಮೂವತ್ತಾದ್ರು ಕೊಡು. ಈ